**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/25/ಚು.ಅಪರಾಧ/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 27.08.2013

ಸಹಕಾರ ಸಂಘಗಳ ಉಪ ನಿಬಂಧಕರು
ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು,

____________ ಜಿಲ್ಲೆ,

____________

ಮಾನ್ಯರೇ,

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ – ಅಪರಾಧಗಳು ಮತ್ತು ಅಪರಾಧವೆಸಗುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಕುರಿತು.

**ಉಲ್ಲೇಖ:-** 1) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39ಸಿ, 39ಎಫ್ ಮತ್ತು 109
2) ಆಯೋಗದ ಪತ್ರ ಸಂ: ಸಚುಆ/17/ನೀತಿಸಂಹಿತೆ/2013-14 ದಿನಾಂಕ:3-8-2013

***

ಕರ್ನಾಟಕ ರಾಜ್ಯದಲ್ಲಿ ಸಹಕಾರ ಚುನಾವಣಾ ಆಯೋಗವು ರಚನೆ ಆದ ನಂತರ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ ಸಾಮಾನ್ಯ ಚುನಾವಣೆ, ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ, ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳಿಗೆ ಚುನಾವಣೆ, ಆಕಸ್ಮಿಕ ಖಾಲಿಯಾಗುವ ನಿರ್ದೇಶಕರ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ಮುಕ್ತವಾಗಿ ಹಾಗೂ ಪಾರದರ್ಶಕವಾಗಿ ನಡೆಸುವ ಸಂಬಂಧ ಆಯೋಗವು ಈಗಾಗಲೇ ಕಾನೂನಿಗನುಗುಣವಾಗಿ ಅವಶ್ಯಕ ಕ್ರಮಗಳನ್ನು ತೆಗೆದುಕೊಂಡಿದೆ. ಚುನಾವಣಾ ಅಧಿಸೂಚನೆಗಳನ್ನು ಹೊರಡಿಸಿರುವಿಕೆ, ಜಿಲ್ಲಾ ಚುನಾವಣಾಧಿಕಾರಿಗಳ ನೇಮಕ, ರಿಟರ್ನಿಂಗ್ ಆಫೀಸರ್ಸ್‌ಗಳ ನೇಮಕಾತಿ, ಪ್ರಾಂತೀಯ ವೀಕ್ಷಕರ ನೇಮಕ, ನೀತಿ ಸಂಹಿತೆ ಪ್ರಕಟಣೆ, ಚುನಾವಣೆ ನಡೆಸುವ ವ್ಯವಸ್ಥೆ ಕುರಿತಂತೆ ಕ್ರಮಕೈಗೊಳ್ಳಲಾಗಿದೆ. ಚುನಾವಣೆ ಕೆಲಸಗಳನ್ನು ಸಮರ್ಪಕವಾಗಿ, ಕಾನೂನಿಗೆ ಅನುಗುಣವಾಗಿ ನಡೆಸುವ ಸಂಬಂಧ ಆಯೋಗವು ಹಲವಾರು ಸುತ್ತೋಲೆ/ ಆದೇಶ/ ಅಧಿಸೂಚನೆಗಳನ್ನು ಹೊರಡಿಸಿರುತ್ತದೆ ಹಾಗೂ ಮಾರ್ಗದರ್ಶಿ ಸೂತ್ರಗಳನ್ನು ನೀಡಿರುತ್ತದೆ.

ರಾಜ್ಯದಲ್ಲಿ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಸಂಬಂಧ ವಿವಿಧ ವರ್ಗಗಳ ಸಹಕಾರ ಸಂಘಗಳಿಗೆ ದಿನಾಂಕ:25-8-2013, 1-9-2013, 7/8-9-2013 ಹಾಗೂ 15-9-2013 ಈ ದಿನಾಂಕಗಳಲ್ಲಿ ಚುನಾವಣೆಯನ್ನು ನಡೆಸಲು ಅಧಿಸೂಚನೆಯನ್ನು ಹೊರಡಿಸಿದ್ದು ದಿನಾಂಕ:25-8-2013 ರಂದು ನಿಗದಿಪಡಿಸಲಾಗಿದ್ದ ಹಾಲು ಉತ್ಪಾದಕರ ಸಹಕಾರ ಸಂಘಗಳ ಚುನಾವಣೆ ಈಗಾಗಲೇ ಮುಗಿದಿದೆ. ಚುನಾವಣೆ ನಡೆಸುವ ವಿಷಯವಾಗಿ ಹಲವಾರು ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರು ರಿಟರ್ನಿಂಗ್ ಆಫೀಸರ್ಸ್‌ಗಳಿಗೆ ಸೂಕ್ತವಾಗಿ ಸಹಕಾರ ನೀಡುತ್ತಿಲ್ಲ ಹಾಗೂ ಚುನಾವಣೆಗೆ ಸಂಬಂಧಿಸಿದಂತೆ ಪೂರ್ವಸಿದ್ಧತಾ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲರಾಗಿ ಕರ್ತವ್ಯಲೋಪವೆಸಗಿರುತ್ತಾರೆಂಬ ವಿಷಯ ಆಯೋಗದ ಗಮನಕ್ಕೆ ಬಂದಿರುತ್ತದೆ. ಚುನಾವಣಾ ಕರ್ತವ್ಯ ಲೋಪವೆಸಗಿರುವುದರಲ್ಲಿ ಮುಖ್ಯವಾಗಿ

i) ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ಲೋಪಗಳು – ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸದಿರುವಿಕೆ, ಆಕ್ಷೇಪಣೆಗಳನ್ನು ಗಮನಿಸದಿರುವುದು.

---2

ii) ಮತದಾರರ ಅರ್ಹತೆ ಹೊಂದಿದ್ದರೂ, ಮತದಾರರ ಪಟ್ಟಿಯಿಂದ ಕೈಬಿಟ್ಟಿರುವುದು.

iii) ಸಾಲಗಾರರ ಕ್ಷೇತ್ರದ ಸದಸ್ಯರನ್ನು ಸಾಲಗಾರರಲ್ಲದ ಕ್ಷೇತ್ರಕ್ಕೆ ಸೇರಿಸಿರುವುದು, ಹಾಗೆಯೇ ಸಾಲಗಾರರಲ್ಲದ ಕ್ಷೇತ್ರದ ಸದಸ್ಯರನ್ನು ಸಾಲಗಾರರ ಕ್ಷೇತ್ರಕ್ಕೆ ಸೇರಿಸಿರುವುದು.

iv) ರಿಟರ್ನಿಂಗ್ ಆಫೀಸರ್ಸ್‌ಗಳಿಗೆ ಚುನಾವಣೆ ಕೆಲಸಗಳನ್ನು ನಿರ್ವಹಿಸುವ ಸಂಬಂಧ ಸೂಕ್ತ ದಾಖಲಾತಿಗಳನ್ನು ಒದಗಿಸದಿರುವಿಕೆ, ತಪ್ಪು ಮಾಹಿತಿ ನೀಡುವುದು, ಸಹಕಾರ, ನೆರವು ನೀಡದಿರುವುದು.

v) ಅಧಿನಿಯಮ, ನಿಯಮಗಳು, ಉಪವಿಧಿಗಳ ಅವಕಾಶದಂತೆ ಸಂಘದ ಮುಖ್ಯಕಾರ್ಯನಿರ್ವಾಹಕರು ಕಾರ್ಯನಿರ್ವಹಿಸದೆ ಕರ್ತವ್ಯ ಲೋಪವೆಸಗಿರುವುದು.

vi) ಭ್ರಷ್ಟ ಪದ್ಧತಿಗಳನ್ನು ಕುರಿತು ಅಧಿನಿಯಮ ಪ್ರಕರಣ 39ಸಿ ನಲ್ಲಿ ವಿವರಿಸಲಾಗಿದೆ.

vii) ಅಧಿನಿಯಮ ಪ್ರಕರಣ 39ಕೆ ನಲ್ಲಿ ಇತರ ಅಪರಾಧಗಳು ಮತ್ತು ದಂಡನೆಗಳ ಬಗ್ಗೆ ವಿವರಿಸಲಾಗಿದೆ.

viii) ಅಧಿನಿಯಮ ಪ್ರಕರಣ 109(20) ಹಾಗೂ 109(21) ಗಳಲ್ಲಿ ವಿವರಿಸಿರುವಂತೆ ಎಸಗುವ ಅಪರಾಧಗಳು/ ದಂಡನೆಗಳು.

ಅಧಿನಿಯಮ ಪ್ರಕರಣ 39ಎಎ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಚುನಾವಣೆಗಳನ್ನು ನಡೆಸಲು ಅವಶ್ಯಕವಾದ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಸಕಾಲದಲ್ಲಿ ಒದಗಿಸಿ ನೆರವು ನೀಡಲು ತಪ್ಪಿದ ಆಡಳಿತ ಮಂಡಳಿಯ ಪ್ರತಿಯೊಬ್ಬ ಸದಸ್ಯನು ಮತ್ತು ಮುಖ್ಯಕಾರ್ಯನಿರ್ವಾಹಕನು, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ಅಧಿನಿಯಮ ಪ್ರಕರಣ 109(21) ರಂತೆ ಯಾವೊಬ್ಬ ವ್ಯಕ್ತಿಯು ಮಂಡಲಿಯ ಸದಸ್ಯರ ಅಥವಾ ಪದಾಧಿಕಾರಿಗಳ ಚುನಾವಣೆಗೆ ಮೊದಲು, ಚುನಾವಣೆ ನಡೆಯುವಾಗ ಅಥವಾ ಚುನಾವಣೆಯ ತರುವಾಯದಲ್ಲಿ 39ಸಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸುವ ಯಾವುದೇ ಭ್ರಷ್ಟ ಆಚರಣೆಯನ್ನು ಅಳವಡಿಸಿದರೆ ಅಥವಾ 39ಕೆ ಪ್ರಕರಣದ ಅಡಿಯಲ್ಲಿನ ಯಾವುದೇ ಚುನಾವಣಾ ಅಪರಾಧಗಳನ್ನು ಎಸಗಿದಲ್ಲಿ, ಅವನು 6 ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲು ದಂಡಿತನಾಗತಕ್ಕದ್ದು.

ಅಲ್ಲದೇ ಭಾರತೀಯ ದಂಡಸಂಹಿತೆ, 1860, ಇದರಲ್ಲಿಯೂ ಸಹ ಚುನಾವಣಾ ಅಪರಾಧಗಳು/ದಂಡನೆಗಳು ಕುರಿತಂತೆ ವಿವರಿಸಲಾಗಿದೆ.

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ, ನಿಮ್ಮ ಜಿಲ್ಲೆಯಲ್ಲಿ ಸಹಕಾರ ಸಂಘದ ಆಡಳಿತ ಮಂಡಳಿ ಅಥವಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯಾವುದೇ ರೀತಿಯ ಅಸಹಕಾರ ಅಥವಾ ಚುನಾವಣಾ ಅಪರಾಧವೆಸಗಿದ್ದಾರೆ ಎಂಬ ಆರೋಪ ಕಂಡುಬಂದ ಪ್ರಕರಣಗಳಿಗೆ ಸಂಬಂಧಿಸಿದಂತೆ ರಿಟರ್ನಿಂಗ್ ಆಫೀಸರ್‌ರಿಂದ ವರದಿ ಪಡೆದು ಅಂತಹವರ ವಿರುದ್ಧ ಕಾನೂನು ರೀತ್ಯಾ ಮೊಕದ್ದಮೆ ಹೂಡುವ ಬಗ್ಗೆ ಕೂಡಲೇ ಅಗತ್ಯ ಕ್ರಮ ತೆಗೆದುಕೊಂಡು ಆಯೋಗಕ್ಕೆ ವರದಿಸುವಂತೆ ನಿರ್ದೇಶಿಸಲಾಗಿದೆ.

**ತಮ್ಮ ವಿಶ್ವಾಸಿ,**

**(ಎನ್.ಸಿ. ಮುನಿಯಪ್ಪ)**
**ಸಹಕಾರ ಚುನಾವಣಾ ಆಯುಕ್ತರು**

**ಪ್ರತಿಗಳು:-**

1) ಸಹಕಾರ ಸಂಘಗಳ ಜಂಟಿ ನಿಬಂಧಕರು, ____________ ಪ್ರಾಂತ, ____________
2) ಸಹಕಾರ ಸಂಘಗಳ ಜಂಟಿ ನಿಬಂಧಕರು, (ಕಾನೂನುಕೋಶ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು
3) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ____________ ಉಪವಿಭಾಗ, ____________
4) ರಕ್ಷಾಕಡತ